
ನನ್ನ ಕಿವಿಗಿರಿಯುತ್ತಲೇ ಇರುತ್ತದೆ. ಮೌನದ ಅಬ್ಬರ ಮಾತುಗಳಿಗೆಲ್ಲಿ?

ಸಿಂಗಾರೆವ್ವ ಮಗು ಮನಸ್ಸಿನ ಹುಡುಗಿ, ಎಲ್ಲದರಲ್ಲೂ ಒಳ್ಳೆಯದನ್ನೇ ಕಾಣುವವಳು. ಹಟ್ಟಿಯಲ್ಲಿ ದನವೊಂದು ಗರ್ಭ ಕಟ್ಟಿದೆ ಎಂದಾಗ ಮಗುವಂತೆ ಸಂಭ್ರಮಿಸುವವಳು. ಕೆಲಸದಾಳು ಗರ್ಭಿಣಿಯಾದಾಗ, ಬೇಕಾದದ್ದನ್ನು ಮಾಡಿ ತಿನ್ನಿಸಿ ಕಾಳಜಿ ತೋರುವಳು. ಅವಳ ಹೊಟ್ಟೆ ಮುಟ್ಟಿ ಮುಟ್ಟಿ ಸಂಭ್ರಮಿಸುವ ಅಕ್ಕರೆ. ಅವಳದ್ದು ತಾಯಿ ಹೃದಯ, ಯಾರಿಗೂ ಕೇಡು ಬಯಸದ ಜೀವ. ಇಡೀ ಪ್ರಪಂಚದಲ್ಲಿ ಅವಳನ್ನು ಪ್ರೀತಿಸುವ, ಅವಳ ನೋವಿಗೆ ಮರಗುವ ಏಕೈಕ ಜೀವ ಶೀನಂಗಿ ಹೀಗೆ ಹೇಳುತ್ತಾಳೆ: "ಕೆಲವರಿರುತ್ತಾರೆ, ನೀವು ಬೆರಳು ಮಾಡಿ ತೋರುವಂಥ ಯಾವ ಕರ್ಮ, ಯಾವ ಪಾಪ, ಯಾವ ಕೆಟ್ಟ ಕೆಲಸವನ್ನೂ ಮಾಡಿರುವುದಿಲ್ಲ. ಇನ್ನೊಬ್ಬರ ಮನಸ್ಸನ್ನೂ ಕೂಡ ನೋಯಿಸಿರುವುದಿಲ್ಲ. ಆದರೆ ಜೀವನದುದ್ದಕ್ಕೂ ಚಂಡಾಲರು ಅನುಭವಿಸುವಂಥ ಯಾತನೆ, ನೋವನ್ನು ಅನುಭವಿಸುತ್ತಾರೆ. ಅವರು ಚಿನ್ನ ಹಿಡಿದರೆ ಮಣ್ಣಾಗುತ್ತದೆ. ಅನ್ನವೆಂದದ್ದು ವಿಷವಾಗುತ್ತದೆ. ಅವರು ಕಾಲಿಟ್ಟಲ್ಲಿ ನಿಂತ ನೀರು ಇಂಗುತ್ತದೆ. ಬೆಳೆದ ಹಸಿರು ಒಣಗುತ್ತದೆ. ಮಕ್ಕಳು, ದನಕರು ಸಾಯುತ್ತವೆ. ನೀನು ಬಂದು, ಅವರ ಅಂತಃಕರಣ ಕಂಡು, 'ದೇವರು ಒಳ್ಳೇದು ಮಾಡಲಿ' ಅಂತ ಮನಸಾರೆ ಹರಸಿದೆ ಅಂತಿಟ್ಟುಕೊ. ಆದರೆ ಪರಿಣಾಮ ಮಾತ್ರ ಅದಕ್ಕೆ ವಿರುದ್ಧವಾಗೇ ಆಗಿರುತ್ತದೆ. ಹಿಂಗ್ಯಾಕೆಂಬುದಕ್ಕೆ ಕಾರಣ ಕಡೀತನಕ ಗೊತ್ತಾಗೋದೇ ಇಲ್ಲ. ಯಾವುದಕ್ಕೂ ಒಂದು ತರ್ಕ ಇರಬೇಕಲ್ಲ. ಅದಿಲ್ಲಿ ಇರೋದೇ ಇಲ್ಲ. ನಮ್ಮ ದೊರೆಸಾನಿ ಅಂಥವಳು."

ಶೀನಂಗಿಯ ಮಾತುಗಳನ್ನು ನಾನು ಎಷ್ಟೋಬಾರಿ ನೆನಪಿಸಿಕೊಂಡಿದ್ದಿದೆ. ಮನುಷ್ಯರ ಮಾತು ಪಕ್ಕಕ್ಕಿರಲಿ, ಆ ದೇವರಿಗೂ ಅಂಥ ಸೂಕ್ಷ್ಮ ಮನಸ್ಸಿನ ಹುಡುಗಿಯ ಮೇಲೆ ಎಂಥಾ ದ್ವೇಷ? ಸ್ವತಃ ಹೆಣ್ಣಾದ ಗ್ರಾಮದೇವತೆ ಕುಮುದವ್ವನಾದರೂ ಒಂದು ಚೂರು ಕರುಣೆ ತೋರಿಸಿದಳೇ? ಹರ ಕೊಲ್ಲಲು ಪರ ಕಾಯ್ವನೇ ಎಂಬ ಗಾದೆ ಸುಮ್ಮನೇ ಹುಟ್ಟಿದೆಯೇ... ಎಂಬೆಲ್ಲ ಪ್ರಶ್ನೆಗಳು ನನ್ನದೂ ಹೌದು.

ದೇವರೋ ಅಥವಾ ವಿಧಿಯೋ ಬೀಸಿ ಎಸೆಯುವ



ಕಷ್ಟದ ದಿನಗಳಲ್ಲಿ ಉಸಿರು ಬಿಗಿ ಹಿಡಿದು ಸಾಗುವ ದಿನಗಳಲ್ಲಿ ಸಿಂಗಾರೆವ್ವ ನನ್ನ ಜೊತೆ ಜೊತೆಗೆ ಹೆಜ್ಜೆ ಹಾಕುತ್ತಿರುತ್ತಾಳೆ. ಅವಳೊಂದು ಭರವಸೆಯ ಪ್ರತೀಕ. ಕಷ್ಟಗಳ ಸುರಿಮಳೆಯಾದಾಗ ತನ್ನ ಘನತೆಯ ಛತ್ರಿ ಹಿಡಿದು ಹರಸಾಹಸ ಮಾಡಿ ಮುನ್ನಡೆಯುವ ಗಟ್ಟಿಗತ್ತಿ. 'ಇಷ್ಟೆಲ್ಲಾ ಕಷ್ಟ ಬಂದಿದ್ದರೆ ನಾ ಸತ್ತೇ ಹೋಗ್ತೀನಿ, ನನಗೇನೂ ಆಗದಿದ್ರೆ ಸಾಕಪ್ಪ' ಅನ್ನುವ ಕೆಟ್ಟ 'ಅಹಂ'ವನ್ನು ಬದಿಗಿಟ್ಟು ಯೋಚಿಸಲು ಹೇಳಿಕೊಟ್ಟವಳು. ಯಮಯಾತನೆಯನ್ನು ನುಂಗಲು ಕಲಿಸಿದವಳು. ಸಾವಿಗಿಂತ ಬದುಕು ದೊಡ್ಡದು ಎಂಬ ಪಾಠವನ್ನು ತನ್ನ ಬದುಕಿನ ಮೂಲಕವೇ ಮಾಡುವ ಪುಣ್ಯಾತ್ಗಿತ್ತಿ. ಪುಸ್ತಕ ಓದಿ ಮುಗಿಸಿ ಕಣ್ಣು ಮುಚ್ಚಿದರೆ ನನ್ನ ಕಣ್ಣೆದುರಿಗೆ ಬರುವ ಸಿಂಗಾರಿಯ ಚಿತ್ರವೆಂದರೆ: ಶಾಲೆಯಾಗಿ ಮಾರ್ಪಾಡಾಗಿರುವ ದೇಸಗತಿಯ ಅರಮನೆ. ಅಲ್ಲಿ ಅವಳ ಮಗ ಮತ್ತು ಮಕ್ಕಳ ತಂಡ ಪ್ರತೀ ಕಂಬಕ್ಕೆ ಸುತ್ತಿ ಆಡುವುದು, ಆ ಮಕ್ಕಳೊಡನೆ ಆಕೆಯೂ ಮಗುವಾಗಿ ಓಡಾಡುವ ಸನ್ನಿವೇಶ.

●